ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 05-03-1970

***ಅಭಿಷೇಕ ಮಾಡುವುದು ಅರ್ಥಾಥ್ ಪ್ರತಿಜ್ಞೆ ಮಾಡುವುದು.*** (जल चढ़ाना अर्थात् प्रतिज्ञा करना)

ಇಂದು ಶಿವಜಯಂತಿಯ ಆಚರಣೆಗೆ ಕರೆಯಲಾಗಿದೆ. ಹೇಗೆ ಆಚರಿಸ ಬಯಸುವಿರಿ? ಮಿಲನವೇ ಆಚರಣೆ ಮಾಡುವುದಾಗಿದೆ. ಜನರು ಮಿಲನ ಮಾಡಲು ಆಚರಿಸುವರು ಮತ್ತು ಮಕ್ಕಳು ಮಿಲನವನ್ನೇ ಆಚರಣೆ ಎಂದು ತಿಳಿಯುತ್ತಾರೆ. ಮಿಲನ ಎಂದರೆ ಭೇಟಿಯಾಗುವುದು, ಭೇಟಿ ಆದ ಮೇಲೆ ಇನ್ನೇನು ಉಳಿಯಿತು. ಮಕ್ಕಳಿಗೆ ಆಚರಿಸುವುದು ಎಂದರೆ 1.ಮಿಲನ ಮಾಡುವುದು ಮತ್ತು 2.ತಮ್ಮ ಸಮಾನ ಮಾಡಿಕೊಳ್ಳುವುದು. ಆದ್ದರಿಂದ ಮಿಲನ ಮಾಡುವುದು ಮತ್ತು ತಯಾರು ಮಾಡುವುದೇ ಶಿವಜಯಂತಿಯ ಆಚರಣೆಯಾಗಿದೆ. ಮಿಲನವನ್ನು ಮಾಡುತ್ತಿರುವಿರಿ ಇನ್ನುಳಿದದ್ದು ತಮ್ಮ ಸಮಾನರನ್ನು ಮಾಡಿಕೊಳ್ಳುವ ಎರಡು ಮಾತುಗಳನ್ನು ಇಂದಿನ ದಿನ ಮಾಡಬೇಕು. ಈ ಎರಡು ಮಾತುಗಳನ್ನು ಮಾಡಿದರೆ ಶಿವಜಯಂತಿಯನ್ನು ಆಚರಿಸಿದಂತೆ. ಭಕ್ತರು ಜಲವನ್ನು ಹಾಕಲು ಹೋಗುವಾಗಲೂ ಅದನ್ನು ಮಾಡಿಸುವ ಬ್ರಾಹ್ಮಣರು ಮಧ್ಯದಲ್ಲಿ ಇರುತ್ತಾರೆ, ತಾವೂ ಸಹ ಬ್ರಾಹ್ಮಣರಾಗಿದ್ದೀರಿ. ಹೇಗೆ ಭಕ್ತರು ಜಲವನ್ನು ಹಾಕಿಸುತ್ತಾರೆಯೋ ಹಾಗೆಯೇ ನೀವು ಮಕ್ಕಳು ತಂದೆಯ ಮೇಲೆ ಆತ್ಮರಿಂದ ನೀರನ್ನು ಹಾಕಿಸುತ್ತೀರಿ. ಈ ನೀರು ಅಥವಾ ಹಾಲು ಹಾಕುವ ಪದ್ಧತಿ ಏಕೆ ಬಂತು? ಜಲ ಹಾಕುವ ಸಮಯದಲ್ಲಿ ಮನಸ್ಸಿನಲ್ಲಿ ಏನನ್ನು ಯೋಚಿಸುತ್ತಾರೆ ಗೊತ್ತಿದೆಯೇ? ಯಾವುದಾದರೂ ಪ್ರತಿಜ್ಞೆ ಮಾಡುವಾಗ ಕೈಯಲ್ಲಿ ಜಲವನ್ನು ತೆಗೆದುಕೊಂಡು ಮಾಡುವರು, ಸೂರ್ಯನಿಗೂ ಜಲವನ್ನು ಬಿಡುವಾಗ ಒಳಗೆ ಪ್ರತಿಜ್ಞೆ ಮಾಡುವುದು, ಜಲ ಅಥವಾ ಹಾಲು ಹಾಕುವ ಭಾವಾರ್ಥವಾಗಿದೆ. ನಿಮ್ಮ ಬಳಿಗೆ ಯಾರಾದರೂ ಬಂದರೆ ಮೊದಲು ಅವರಿಂದ ಪ್ರತಿಜ್ಞೆಯ ಜಲವನ್ನು ತೆಗೆದುಕೊಳ್ಳಿ. ಇಂದಿನಿಂದ ಒಬ್ಬ ಶಿವತಂದೆಯವರಾಗಿ ಇರುವೆವು ಎಂದು ಅವರಿಂದ ಪ್ರತಿಜ್ಞೆ ಮಾಡಿಸುತ್ತೀರಲ್ಲವೇ? ಆ ಜನರೂ ಸಹ ಒಳಗೆ ಪ್ರತಿಜ್ಞೆ ಮಾಡಿ ನಂತರ ಸಮ್ಮುಖದಲ್ಲಿ ಬಂದು ದೇವತೆಗಳ ಮೇಲೆ ಅರ್ಪಣೆ ಮಾಡುತ್ತಾರೆ. ಯಾರು ಪೂರ್ಣ ಭಕ್ತರಾಗಿರುವರೋ ಅವರು ಎಲ್ಲವನ್ನು ಅರ್ಪಣೆ ಮಾಡುತ್ತಾರೆ. ತಾವೂ ಸಹ ಮೊದಲು ಅವರಿಂದ ಪ್ರತಿಜ್ಞೆ ಮಾಡಿಸುತ್ತೀರಿ. ಪಕ್ಕಾ ಆದಾಗ ಸಂಪೂರ್ಣ ಸ್ವಾಹಾ ಮಾಡಿಸುತ್ತೀರಿ. ಈ ರೀತಿಯ ಸೇವೆ ಮಾಡಬೇಕು. ಸಂಪೂರ್ಣ ಅರ್ಪಣೆಯಾಗಬೇಕು. ನೀವು ಎಷ್ಟು ಜನರನ್ನು ಅರ್ಪಣೆ ಮಾಡಿಸಿರುವಿರಿ? ಯಾರು ಎಷ್ಟು ಅರ್ಪಣೆಯಾಗಿರುವರೋ ಅಷ್ಟೇ ಬೇರೆಯವರನ್ನು ಮಾಡುವಿರಿ. ಒಂದು ವೇಳೆ ಸಂಪೂರ್ಣ ಅರ್ಪಣೆಯಾಗಿರದಿದ್ದರೆ ಬೇರೆಯವರನ್ನೂ ಅಷ್ಟೇ ತಮ್ಮ ಸಮಾನ ಮಾಡಿಕೊಳ್ಳುವಿರಿ. ಈಗ ಅರ್ಪಣೆಯಾಗುವಲ್ಲಿ ಪರಿಶ್ರಮ ಮತ್ತು ಸಮಯ ಎರಡೂ ಬೇಕಾಗುತ್ತದೆ. ಆದರೆ ಸ್ವಲ್ಪವೇ ಸಮಯದಲ್ಲಿ ಅರ್ಪಣೆಯಾಗುವವರ ಕ್ಯೂ ನಿಲ್ಲುವುದು, ಕಾಶಿಯಲ್ಲಿರುವ ಕತ್ತಿಗಳ ಬಾವಿಯ (ಕಲ್ವಟ) ಸ್ಮೃತಿಚಿಹ್ನೆಯಂತೆ ಇಲ್ಲಿಯೂ ಸ್ವಯಂ ತಮ್ಮ ಇಚ್ಛೆಯಿಂದ ತಲೆ ಕತ್ತರಿಸಿಕೊಳ್ಳಲು ತಯಾರಾಗುತ್ತಾರೆ. ನಿಮಗೆ ಇಚ್ಛೆ ಉತ್ಪನ್ನ ಮಾಡುವ ಪರಿಶ್ರಮ ಮಾಡಬೇಕಾಗಿಲ್ಲ. ಸ್ವಯಂ ತಮ್ಮ ಇಚ್ಛೆಯಿಂದ ಜಿಗಿಯಲು ತಯಾರಾಗುವರು. ಈ ಸಾಲು (ಕ್ಯೂ) ನಿಲ್ಲಲಿದೆ. ಈಗ ಇನ್ನೂ ಇಲ್ಲ, ಇದಕ್ಕೂ ಕಾರಣವಿದೆ. ಮಕ್ಕಳ ಬಳಿ ಈಗ ಯಾವ ಸಾಲು ನಿಂತಿದೆ (ಸಂಕಲ್ಪಗಳ ಕ್ಯೂ)? ಸಂಕಲ್ಪಗಳ ಸಾಲು ಸಮಾಪ್ತಿಯಾದಾಗ ಈ ಸಾಲು ಶುರುವಾಗುವುದು ಅದು ಯಾವುದೆಂದು ಗೊತ್ತಿದೆಯಾ? (ಸಂಕಲ್ಪಗಳ ಕ್ಯೂ) ಮುಖ್ಯವಾಗಿ ಪುರುಷಾರ್ಥವನ್ನು ಸಡಿಲಗೊಳಿಸುವ ಸಂಕಲ್ಪಗಳು ಯಾವವು? ವ್ಯರ್ಥ ಸಂಕಲ್ಪಗಳೇ ಮೂಲ ಕಾರಣವಾವುದು? ಹಳೆಯ ಸಂಸ್ಕಾರಗಳು ಯಾವ ರೂಪದಲ್ಲಿ ಬರುತ್ತವೆ? ವ್ಯರ್ಥ ಸಂಕಲ್ಪಗಳ ಬೀಜವೇ ಬರುವಂತಹ ಒಂದು ಶಬ್ದವನ್ನು ಹೇಳಿ, ವ್ಯರ್ಥ ಸಂಕಲ್ಪ ಅಥವಾ ವಿಕಲ್ಪಗಳು ನಡೆಯಲು ಬುದ್ಧಿಯಲ್ಲಿ ಪ್ರಶ್ನೆ ಬರುತ್ತದೆ - ಇದು ಏಕೆ ಆಯಿತು, ಏಕೆ ಎಂಬ ಒಂದು ವಿಷಯದಿಂದಲೇ ಕ್ಯೂ ಶುರುವಾಗುತ್ತದೆ. ಇಂಗ್ಲೀಷನಲ್ಲಿ ಏಕೆ (?) ಎಂಬ ಚಿಹ್ನೆ ಹಚ್ಚು ಸೊಟ್ಟ. ಏಕೆ ಎಂಬ ಕ್ಯೂ ಬಹಳ ಉದ್ದವಾಗಿದೆ. ಈ ಕ್ಯೂನ ಸಮಾಪ್ತಿಯ ನಂತರವೆ ಸಂಪೂರ್ಣತೆ ಬರುವುದು, ನಂತರ ಆ ಕ್ಯೂ ಇರುವುದು. ನಾಟಕದ ಭವಿಷ್ಯದ ಬಗೆಗೆ ಏಕೆ ಎಂಬ ಶಬ್ದವನ್ನು ತೆಗೆದಾಗ ಏಕರಸ ಮತ್ತು ಸ್ಥಿರವಾಗಿರುವಿರಿ. ಹಾಗಾದರೆ ಈಗ ಏಕೆ ಎಂಬ ಕ್ಯೂ ಸಮಾಪ್ತಿ

ಮಾಡಿಕೊಳ್ಳಬೇಕು. ತಿಳಿಯಿತೇ? ಏಕೆ ಎಂಬ ಒಂದು ಶಬ್ದದಿಂದ ಎಷ್ಟು ಸಂಕಲ್ಪಗಳು ಹುಟ್ಟುತ್ತವೆ? ಏಕೆ ಎಂಬ ಶಬ್ದದಿಂದ ಕಲ್ಪನೆ ಮಾಡುವುದು ಆರಂಭವಾಗುತ್ತದೆ. ತಂದೆಯೂ ಮಕ್ಕಳಿಂದ ಈ ಜಲದ ಅರ್ಪಣೆ ಮಾಡಿಸಲು ಬಂದಿದ್ದಾರೆ. ಯಾವ ಪ್ರತಿಜ್ಞೆ ಮಾಡಿದರೂ ಜಲವನ್ನು ಸಾಕ್ಷಿಯಾಗಿಟ್ಟುಕೊಂಡು ಮಾಡುತ್ತಾರೆ. ಈಗ ಇದನ್ನು ಅರ್ಪಣೆ ಮಾಡಬೇಕು.

ಮಧುಬನದಲ್ಲಿ ಪಾಂಡವ ದಳದ ವಿಶೇಷ ಜವಾಬ್ದಾರಿಯಿದೆ, ಆ ದಳದಲ್ಲಿ ಈಗ ಬಲ ಬೇಕು. **ಪಾಂಡವ ದಳದಲ್ಲಿ ಬಲವಿದ್ದಾಗ ಈ ಪಾಂಡವ ಭವನದೊಳಗೆ ಆಸುರೀ ಸಂಪ್ರದಾಯದವರೇ ಅಲ್ಲ, ಆಸುರೀ ಸಂಕಲ್ಪವಿರುವವರೂ ಬರಲಾಗುವುದಿಲ್ಲ. ಇಷ್ಟು ಕಾವಲು ಕಾಯಬೇಕು. ಸ್ಥೂಲ ಕಾವಲು ಕಾಯುವುದು ಬಹಳ ಸಹಜವಾಗಿದೆ. ಹೇಗೆ ಈ ದ್ವಾರದ ಕಾವಲು ಕಾಯುತ್ತೀರಲ್ಲವೇ, ಅದೇ ರೀತಿ ಮಾಯೆಯ ದ್ವಾರದ ಕಾವಲು ಕಾಯಬೇಕು.** ಈ ರೀತಿಯಲ್ಲಿ ಆಸುರೀಯ ಸಂಸ್ಕಾರಗಳನ್ನು, ಆಸುರೀಯ ಸಂಕಲ್ಪಗಳನ್ನು ಪಾಂಡವ ಭವನದ ಒಳಗೆ ಬಿಡದಿರುವಂತಹ ಪಾಂಡವ ಸೇನೆ ತಯಾರಿದೆಯಾ? ತಮ್ಮೊಳಗೆ ಮೊದಲು ಈ ರೀತಿಯ ಕಾವಲು ಶಕ್ತಿಶಾಲಿಯಾಗಿದ್ದರೆ ಪಾಂಡವ ಭವನದಲ್ಲಿ ಈ ಶಕ್ತಿಯನ್ನು ತರಬಹುದು. ಈ ರೀತಿ ಕಾವಲು ಕಾಯುತ್ತೀರಾ? ಈ ರೀತಿ ನಾವು ಪಾಂಡವ ಸೈನಿಕರು ನಮ್ಮ ಪಾಂಡವ ಭವನದ ರಕ್ಷಣೆ ಮಾಡುವೆವು ಎಂದು ಯಾರ್ಯಾರು ಸಾಹಸವಿಟ್ಟುಕೊಳ್ಳುವಿರಿ? ಈ ರೀತಿ ಪಾಂಡವ ಭವನದ ರಕ್ಷಣೆ ಮಾಡಿದರೆ ಈ ಪಾಂಡವ ಭವನ ಒಂದು ಜಾದೂ ಮನೆಯಾಗುವುದು. **ಎಂತಹದೇ ಆತ್ಮ ಬರಲಿ, ಬರುತ್ತಲೇ ಆಸುರೀ ಸಂಸ್ಕಾರಗಳು ಮತ್ತು ವ್ಯರ್ಥ ಸಂಕಲ್ಪಗಳಿಂದ ಮುಕ್ತರಾಗಬೇಕು**. ಈ ರೀತಿ ನಿರ್ವಿಕಲ್ಪ ಮಾಡುವ ಜಾದೂ ಮನೆಯಾಗುವುದು. ಈ ರೀತಿಯ ಸೇವೆಯನ್ನು ಯಾವಾಗ ಮಾಡುವಿರೋ ಆಗ ಪ್ರತ್ಯಕ್ಷತೆಯಾಗುವುದು. ಒಬ್ಬರಿಂದೊಬ್ಬರು ಕೇಳುತ್ತಲೇ ಜನ ಓಡಿ ಬರುವರು. ಹೇಗೆ ಸಮಯ ಮುಂದೆ ಹೋಗುವುದೋ ಹಾಗೆ ದುಃಖ ಅಶಾಂತಿ ಹೆಚ್ಚುವ ಕಾರಣ ಪ್ರತಿಯೊಂದು ಆತ್ಮನಲ್ಲಿ ಸುಖ ಶಾಂತಿಯ ಬಾಯಾರಿಕೆ ಹೆಚ್ಚುವುದು ಮತ್ತು ಆ ಬಾಯಾರಿಕೆಯಿಂದ ತತ್ತರಿಸಿದ ಆತ್ಮರು ಪಾಂಡವ ಭವನದೊಳಗೆ ಬಂದಾಗ ಒಂದು ಕ್ಷಣದಲ್ಲಿ ಸುಖ-ಶಾಂತಿಯ ಅನುಭವ ಮಾಡುವರು. ಆಗ ಪ್ರಭಾವ ಬೀರುವುದು, ಒಬ್ಬೊಬ್ಬರು ಒಂದೊಂದು ಚೈತನ್ಯ ಮೂರ್ತಿಯ ಸಮಾನ ದರ್ಶನೀಯ ಮೂರ್ತಿಯಾಗುವಿರಿ. ಈ ರೀತಿ ಕಾವಲು ಕಾಯುವುದನ್ನು ಶುರು ಮಾಡಿದಾಗ ಒಂದೊಂದು ರತ್ನದ ದರ್ಶನ ಮಾಡಲು ದೂರದಿಂದ ಆತ್ಮರು ಬರುವರು. ಸಂಘಟನೆಯ ಬಲವಿದೆ, ಸ್ನೇಹದ ಬಲವಿದೆ, ಪರಸ್ಪರರ ಸಹಯೋಗ ಕೊಡುವುದರಲ್ಲಿಯೂ ಬಲವಿದೆ. ಈಗ ಕೇವಲ ಇನ್ನೊಂದು ಬಲ ಬೇಕು, ಅದರ ಕೊರತೆಯಿಂದಲೇ ಮಾಯೆಯ ಪ್ರವೇಶವಾಗುವುದು. ಅದಾಗಿದೆ ಸಹನಶೀಲತೆಯ ಬಲ, ಒಂದು ವೇಳೆ ಸಹನಶೀಲತೆಯ ಬಲವಿದ್ದರೆ ಮಾಯೆ ಎಂದಿಗೂ ಆಕ್ರಮಣ ಮಾಡುವುದಿಲ್ಲ. ಆದ್ದರಿಂದ ಈ ನಾಲ್ಕೂ ಬಲಗಳು ಬೇಕು.

ಇಂದು ಬಾಪ್ ದಾದಾರ ಜಯಂತಿಯ ಜೊತೆಗೆ ಎಲ್ಲಾ ಮಕ್ಕಳ ಜಯಂತಿಯೂ ಆಗಿದೆ. ಆದ್ದರಿಂದ ಈ ಜಯಂತಿಯಂದು ನಾಲ್ಕೂ ಬಲಗಳನ್ನು ತಮ್ಮಲ್ಲಿ ಧಾರಣೆ ಮಾಡಿದರೆ ಈ ಪಾಂಡವ ಭವನ ಇಡೀ ಜಗತ್ತಿನಲ್ಲಿ ಪ್ರೇಕ್ಷಣೀಯ ಮತ್ತು ಅನುಭವ ಮಾಡುವ ವಿಶೇಷ ಸ್ಥಾನವೆಂದು ಪರಿಗಣಿಸಲಾಗುತ್ತದೆ. ಈ ಪಾಂಡವ ಭವನದ ಮಹತ್ವ ಇಡೀ ಜಗತ್ತಿನಲ್ಲಿ ಆಗುವುದು, ಮಹತ್ವ ಹೆಚ್ಚಿಸುವವರು ಯಾರು? ಪಾಂಡವ ಸೇನೆ ಮತ್ತು ಶಕ್ತಿ ಸೇನೆ. ಮಧುಬನ ನಿವಾಸಿಗಳೇ ಮಧುಬನದ ಮಹತ್ವವನ್ನು ಹೆಚ್ಚಿಸಬಲ್ಲರು ಪಾಂಡವರು ಎಂದೂ ಪ್ರತಿಜ್ಞೆಯಿಂದ ಹಿಂಜರಿಯುವುದಿಲ್ಲ ಎಂದು ಪ್ರಸಿದ್ಧವಾಗಿದೆ. ಒಂದೇ ಪ್ರತಿಶತದ ಕೊರತೆ ಇದ್ದರೂ ಇದನ್ನು ಕೊರತೆ ಎಂದೇ ಹೇಳಲಾಗುತ್ತದೆ. ತಮ್ಮನ್ನು ನೋಡಿ ಬೇರೆಯವರಿಗೂ ಪ್ರೇರಣೆಯಾಗುವಂತೆ ಪಾಂಡವ ಸೇನೆ ಉದಾಹರಣೆಯಾಗಬೇಕು. ಅನೇಕರಿದ್ದರೂ ಒಬ್ಬರಾಗಿ ಒಬ್ಬನ ನೆನಪಿನಲ್ಲಿ ಮಗ್ನರಾಗಿದ್ದಾರೆ ಮತ್ತು ಏಕರಸ ಸ್ಥಿತಿಯಲ್ಲಿ ಸ್ಥಿತರಾಗಿದ್ದಾರೆ ಎಂದು ಯಾರೇ ಮಧುಬನಕ್ಕೆ ಬಂದರೂ ಈ ವಿಶೇಷತೆಯನ್ನು ನೋಡಬೇಕು. ಇಂತಹ ದೃಶ್ಯವನ್ನು ನೋಡಿದಾಗ ಪ್ರತ್ಯಕ್ಷತೆಯ ಚಿಹ್ನೆಗಳು ಕಂಡು ಬರುವವು. ತಮ್ಮೆಲ್ಲರ ಪ್ರತಿಜ್ಞೆಯೇ ಪ್ರತ್ಯಕ್ಷತೆಯನ್ನು ತರುವುದು. ಆದ್ದರಿಂದ ಇಂದು ಮೊದಲು ಪ್ರತಿಜ್ಞೆಯ ಜಲವನ್ನು ಹಾಕಿ ನಂತರ ಉಡುಗೊರೆಯೂ ಸಿಗುವುದು. ಪ್ರತಿಜ್ಞೆಯ ಮೂರು ಗೆರೆಗಳನ್ನು ತೋರಿಸುತ್ತಾರೆ. ಮೂರು ಎಲೆಗಳುಳ್ಳ ಬಿಲ್ವಪತ್ರೆಯನ್ನು ಏರಿಸುತ್ತಾರೆ. **ಆದ್ದರಿಂದ ಇಂದಿನ ದಿನ ಮೂರು ಪ್ರತಿಜ್ಞೆಗಳನ್ನು ಮಾಡಿಸಿದರು-ಸಹಶೀಲತೆಯ ಬಲ ತಮ್ಮಲ್ಲಿ ಧಾರಣೆ ಮಾಡಿಕೊಳ್ಳುವಿರಿ, ಏಕೆ ಎಂಬ ಕ್ಯೂ ಸಮಾಪ್ತಿ ಮಾಡುವಿರಿ ಮತ್ತು ಆಸುರಿ ಸಂಸ್ಕಾರಗಳ ಮೇಲೆ ಕಾವಲು ಕಾಯುವಿರಿ**. ಈ ಪ್ರತಿಜ್ಞೆಗಳ

ಬಿಲ್ವಪತ್ರವನ್ನು ಏರಿಸಿ, ಭಕ್ತರು ಆಟ ಆಡುತ್ತಾರೆ ಆದರೆ ಜ್ಞಾನ ಸಹಿತ ಆಟ ಆಡುವುದನ್ನು ಮಕ್ಕಳೇ ತಿಳಿದಿದ್ದಾರೆ. ಆದ್ದರಿಂದ ಇಂದಿನ ಶಿವರಾತ್ರಿಯ ಸ್ಮೃತಿಚಿಹ್ನೆ ಮತ್ತೆ ಭಕ್ತಿಯಲ್ಲಿ ಪರಂಪರೆಯಾಗಿ ನಡೆಯುತ್ತದೆ. ಮೊದಲು ಮಕ್ಕಳೇ ಜ್ಞಾನ ಸಹಿತ ಆಟದ ಆರಂಭ ಮಾಡುತ್ತಾರೆ, ನಂತರ ಭಕ್ತರು ಅಂಧಶ್ರದ್ಧೆಯಿಂದ ಅನುಕರಣೆ ಮಾಡುತ್ತಾರೆ. ಎಂದಾದರೂ ಅವಶ್ಯವಾಗಿ ಮಾಡಿರಬೇಕು ಆದ್ದರಿಂದಲೇ ಸ್ಮೃತಿಚಿಹ್ನೆ ತಯಾರಾಗಿದೆ.

ಭಗವಂತ ಮಕ್ಕಳಿಗೆ "ವಂದೇ ಮಾತರಂ" ಎಂದು ಹೇಳುತ್ತಾರೆ ಆದರೆ ಎಷ್ಟೊಂದು ವ್ಯತ್ಯಾಸವಿದೆ ನೋಡಿ. ಇಷ್ಟು ನಶೆಯಿರುತ್ತದೆಯೇ? ಅನೇಕ ಭಕ್ತರು ಯಾವ ಭಗವಂತನ ವಂದನೆ ಮಾಡುತ್ತಾರೋ, ಅವರೇ ಸ್ವತಃ ಬಂದು ವಂದೇ ಮಾತರಂ ಎಂದು ಹೇಳುತ್ತಾರೆ. ಈ ನಶೆಯ ಲಕ್ಷಣಗಳೇನು? ಅವರ ನಯನ, ಮುಖ, ಚಲನವಲನ, ಮಾತು ಎಲ್ಲವುಗಳಿಂದ ಖುಷಿ ಹೊರಹೊಮ್ಮುತ್ತದೆ. ಅದನ್ನು ನೋಡಿ ಅನೇಕರ ದುಃಖ ದೂರವಾಗುತ್ತದೆ. ಸ್ವಯಂ ಬಾಪ್ ದಾದಾ ವಂದನೆ ಮಾಡುವಂತಹ ಮಾತೆಯರ ಲಕ್ಷಣವಾಗಿದೆ ಖುಷಿ, ಮುಖವೇ ಅನೇಕ ಆತ್ಮರಿಗೆ ಸಂತೋಷ ಕೊಡುತ್ತದೆ. ಅಜ್ಞಾನಿಗಳು ಬೆಳಿಗ್ಗೆ ಎದ್ದು ಯಾರ ಮುಖವನ್ನು ನೋಡುತ್ತಾರೋ ಅವರ ಪ್ರಭಾವವಾಯಿತೆಂದು ಹೇಳುತ್ತಾರೆ. ಆದ್ದರಿಂದ ತಮ್ಮ ಹರ್ಷಿತಮುಖವನ್ನು ನೋಡಿ ಎಲ್ಲರಿಗೂ ಖುಷಿಯಾಗುವುದು. ಹೀಗೆ ಆಗಲಿಕ್ಕಿದೆ. ಒಳ್ಳೆಯದು - ಎಷ್ಟು ತಮ್ಮ ಪರಿಶೀಲನೆ ಮಾಡಿಕೊಳ್ಳುವಿರೋ ಅಷ್ಟು ಪರಿವರ್ತನೆಯಾಗುವುದು ಸಂಕಲ್ಪ, ಕರ್ಮ, ಸಮಯ, ಸಂಸ್ಕಾರ ಈ ನಾಲ್ಕನ್ನೂ ಹೆಜ್ಜೆಹೆಜ್ಜೆಗೂ ಪರಿಶೀಲನೆ ಮಾಡಿಕೊಳ್ಳಬೇಕು.

ಅವ್ಯಕ್ತ ಮುರಳಿ 05-03-1970.

***ಅಭಿಷೇಕ ಮಾಡುವುದು ಅರ್ಥಾತ್ ಪ್ರತಿಜ್ಞೆಯನ್ನು ಮಾಡುವುದು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಮಿಲನ ಮತ್ತು ಸರ್ವರನ್ನು ಸಮಾನವಾಗಿ ತಯಾರು ಮಾಡಿ ಶಿವ ಜಯಂತಿಯನ್ನು ಆಚರಿಸಿಕೊಂಡಿದ್ದೇನೆ.

2. ನಾನು ವಿಶ್ವದಲ್ಲಿರುವ ಆತ್ಮಿಕ ಸಹೋದರರಿಂದ "ನಾವು ಇಂದಿನಿಂದ ಒಬ್ಬ ಶಿವ ತಂದೆಯವರಾಗಿ ಇರುತ್ತೇವೆ" ಎಂಬ ಪ್ರತಿಜ್ಞೆಯನ್ನು ಮಾಡಿಸುವ ಸಂಪೂರ್ಣ ಸಮರ್ಪಣಾ ಸ್ವರೂಪ.

3. ನಾನು ಏಕೆ ಎಂಬ ಕ್ಯೂ ಅನ್ನು (ವ್ಯರ್ಥ ಸಂಕಲ್ಪಗಳನ್ನು ಹುಟ್ಟಿಸುತ್ತದೆ) ಸಮಾಪ್ತಿ ಮಾಡಿ ಸಂಪೂರ್ಣವಾಗಿ ತಯಾರಾಗಿ, ಎಲ್ಲರ ಸಂಪೂರ್ಣತೆಯ ಸಾಲಿಗಾಗಿ ನಿಮಿತ್ತವಾಗಿದ್ದೇನೆ.

4. ಮಾಯೆಯ ದ್ವಾರದಿಂದ ನನ್ನನ್ನು ನಾನು ರಕ್ಷಿಸಿಕೊಳ್ಳುವ ಪಾಂಡವ ಸ್ವರೂಪ.

5. ಎಂತಹ ಆತ್ಮರು ನನ್ನ ಎದುರಿಗೆ ಬಂದರೂ ಅಸುರೀ ಸಂಸ್ಕಾರಗಳಿಂದ ಮತ್ತು ವ್ಯರ್ಥ ಸಂಕಲ್ಪಗಳಿಂದ ಮುಕ್ತಿಯನ್ನು ಹೊಂದಿ ನಿರ್ವಿಕಲ್ಪವಾಗಿ ತಯಾರಾದರು.

6. ನಾನು ಚೈತನ್ಯ ಮೂರ್ತಿಯ ಸಮಾನ, ದರ್ಶನೀಯ ಮೂರ್ತಿ.

7. ನಾನು ಸಂಘಟನೆಯಲ್ಲಿ ಸ್ನೇಹ, ಸಹಯೋಗ ಮತ್ತು ಸಹನಶೀಲತೆಯ ಬಲವುಳ್ಳ ಮಾಯಾಜಿತ್ ಸ್ವರೂಪ.

8. ನಾನು ಮಧುಬನದ ಮಹತ್ವ ಹೆಚ್ಚಿಸುವ ಮಧುವನ ನಿವಾಸಿ.

9. ನಾನು ಮೂರು ಪ್ರತಿಜ್ಞೆಗಳನ್ನು ಮಾಡಿದ್ದೇನೆ.

- ಏಕೆ ಎಂಬ ಪ್ರಶ್ನೆಗಳ ಕ್ಯೂ (ಸಾಲನ್ನು) ಅನ್ನು ಸಮಾಪ್ತಿ ಮಾಡಿದ್ದೇನೆ.
- ಅಸುರೀ ಸಂಸ್ಕಾರಗಳಿಗೆ ಕಾವಲಾಗಿ ಇರುತ್ತೇನೆ.
- ಸಹನಶೀಲತೆಯ ಗುಣವನ್ನು ಧಾರಣೆ ಮಾಡಿದ್ದೇನೆ.

10. ನನ್ನ ಮುಖ, ನಯನ, ಚಲನವಲನ, ಮಾತು ಖುಷಿಯನ್ನು ಹೊರಹೊಮ್ಮಿಸುತ್ತಿವೆ.